**ಕರ್ನಾಟಕ ಲೋಕಾಯುಕ್ತ**

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ.2059/2013/ಸನಿಕಾಸ–2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:8.6.2017.

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ**

**ವಿಷಯ:–** 2 ಮತ್ತು 3ನೇ ಎದುರುದಾರರ ಕರ್ತವ್ಯಲೋಪದಿಂದ ಸರ್ಕಾರದ ಬೊಕ್ಕಸಕ್ಕೆ ಉಂಟಾದ ಮುದ್ರಾಂಕ ಮತ್ತು ನೋಂದಣಿ ಶುಲ್ಕದ ನಷ್ಟದ ಹಣವನ್ನು ಕಾನೂನು ಪ್ರಕಾರ 2 ಮತ್ತು 3ನೇ ಎದುರುದಾರರಿಂದ ವಸೂಲು ಮಾಡಿಕೊಳ್ಳಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡುವ ಬಗ್ಗೆ.

*******

ಶ್ರೀ ರಾಜಣ್ಣ, ಅಡೇಪೇಟೆಯ ನಿವಾಸಿ, ನೆಲಮಂಗಲ ತಾಲ್ಲೂಕು, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಶ್ರೀ ರುಕ್ಮಾಂಗದ.ಡಿ.ಎಲ್.ಅಂದಿನ ಉಪನೋಂದಣಾಧಿಕಾರಿಗಳು, (2) ಶ್ರೀ **ಬಸವಾರಾಧ್ಯ.ಎಂ. ಅಂದಿನ ಉಪನೋಂದಣಾಧಿಕಾರಿಗಳು, ನೆಲಮಂಗಲ,**(3) ಶ್ರೀ **ಬಿ.ಜಿ.ರಾಮದಾಸೇಗೌಡ, ಉಪನೋಂದಣಾಧಿಕಾರಿಗಳು, ನೆಲಮಂಗಲ,** (4) ಶ್ರೀ ದೇವರಾಜ್, ಉಪನೋಂದಣಾಧಿಕಾರಿಗಳು, ನೆಲಮಂಗಲ, (ಇನ್ನು ಮುಂದೆ ಕ್ರಮವಾಗಿ 1ರಿಂದ 4ನೇ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:–**

ದೂರುದಾರರು ತಮ್ಮ ದೂರಿನಲ್ಲಿ ಎದುರುದಾರರು ನೆಲಮಂಗಲ ತಾಲ್ಲೂಕಿನಲ್ಲಿ ಉಪ ನೋಂದಣಾಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಈ ಕೆಳಗಿನಂತೆ ಅಕ್ರಮವೆಸಗಿ ಬೇನಾಮಿ ಆಸ್ತಿ ಮಾಡಿರುತ್ತಾರೆ.

1) ನೆಲಮಂಗಲ ಪುರಸಭೆಯಲ್ಲಿನ ಖಾತೆ ಸಂ.1969/1660/1–8ರಲ್ಲಿ 23 ಆಸ್ತಿಗಳು ನೋಂದಣಿಯಾಗಿದ್ದು ಇವುಗಳ ಮಾರುಕಟ್ಟೆ ಬೆಲೆ ಗರಿಷ್ಠ 30 ಲಕ್ಷ ರೂ.ಇರುತ್ತದೆ. ಆದರೆ ಸ್ಥಿರ ಆಸ್ತಿ ಹಸ್ತಾಂತರ ಪ್ರಕರಣದಲ್ಲಿ ಸ್ವತ್ತಿನಲ್ಲಿ ತೋರಿಸಿರುವ ಮೌಖಿಕ ಪ್ರತಿಫಲ 5 ಲಕ್ಷಕ್ಕಿಂತ ಹೆಚ್ಚಾಗಿದ್ದು, ಇದರಲ್ಲಿ ವರಮಾನ ತೆರಿಗೆ ಕಾಯ್ದೆ ಘೋಷಣಾ ಪತ್ರ ಪಡೆದಿಲ್ಲ.

2) ನೆಲಮಂಗಲ ಪುರಸಭೆಯಲ್ಲಿನ ಖಾತೆ ಸಂ.7580, 7557, 7581, ಖಾತೆಗಳು ಏಕ ಖಾತೆಗೆ ಅನುಗುಣವಾಗಿ ಮಂಜೂರಾಗಿದ್ದು ಆದರೆ ಎದುರುದಾರರು ಈ ಖಾತೆಗಳನ್ನು ವಿಭಜನೆ ಮೂಲಕ ನೋಂದಣಿ ಮಾಡಿರುತ್ತಾರೆ.

3) ಎಂಟಗಾನಹಳ್ಳಿ ಗ್ರಾಮಪಂಚಾಯತಿ ವ್ಯಾಪ್ತಿಯ ಭಾವಿಕೆರೆ ಗ್ರಾಮದ ಸರ್ವೆ ನಂ.103,10/2,11/2, 108, 106 ಜಮೀನುಗಳನ್ನು ಸರ್ಕಾರದ ಮಾರ್ಗಸೂಚಿ ಬೆಲೆಗಿಂತ ಕಡಿಮೆ ಮೌಲ್ಯಕ್ಕೆ ನೋಂದಾಯಿಸಿದ್ದು, ಇದರಿಂದ ನೋಂದಣಿ ಹಾಗೂ ಮುದ್ರಾಂಕ ಶುಲ್ಕ ವಂಚನೆಯಾಗಿರುತ್ತದೆ. ಅಲ್ಲದೆ ಆದಾಯ ತೆರಿಗೆಯಿಂದ ಕ್ರಯದಾರರು ವಿಮುಕ್ತಿಹೊಂದಲು ಪರೋಕ್ಷವಾಗಿ ಸಹಾಯ ಮಾಡಿರುತ್ತಾರೆ.

4) ಮಲ್ಲರಬಾಣವಾಡಿ ಗ್ರಾಮದ 507/533, 507/450, 510/151 ಈ ನಿವೇಶನಗಳನ್ನು ಅಪಮೌಲ್ಯಕ್ಕೆ ನೊಂದಣಿ ಮಾಡಿರುತ್ತಾರೆ.

5) ಅರಿಶಿನಕುಂಟೆ ಗ್ರಾಮಪಂಚಾಯತಿಯ ವ್ಯಾಪ್ತಿಯ ಖಾತೆ ನಂ. 874/1 ರಿಂದ 197, 875/1 ರಿಂದ 24, 748/1 ರಿಂದ 740 ಅಪಮೌಲ್ಯಕ್ಕೆ ನೊಂದಣಿ ಮಾಡಿರುತ್ತಾರೆ.

6) ಎದುರುದಾರರು ಸರ್ಕಾರಿ ಸುತ್ತೋಲೆ ಸಂ.ಗ್ರಾಅಪಂ 46/ಗ್ರಾಪಂ.2013 ದಿ.8.3.2013 ನಂ.ಗ್ರಾಅಪ/55/ಗ್ರಾಪಂ/ 2012 ದಿ.28.12.2013 ಮತ್ತು ಗ್ರಾಅಪ 553./ಗ್ರಾಪಂ/ಅ/012 ದಿ.4.1.2013 ಮತ್ತು ರಾಜ್ಯ ಶ್ರೇಷ್ಠ ನ್ಯಾಯಾಲಯದ ದಾವೆ ಸಂ.ರಿಟ್ 2278/2007 ದಿ.7.7.2012ರ ಆದೇಶಗಳನ್ನು ಸ್ಪಷ್ಟವಾಗಿ ಉಲ್ಲಂಘಿಸಿರುತ್ತಾರೆ.

ಆದ್ದರಿಂದ ಈ ಬಗ್ಗೆ ಪರಿಶೀಲಿಸಿ ಎದುರುದಾರರ ವಿರುದ್ಧ ಕ್ರಮಕೈಗೊಳ್ಳಬೇಕೆಂದು ಕೋರಿ ದೂರು ಸಲ್ಲಿಸಿದ್ದಾರೆ.

3. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರಿನಲ್ಲಿನ ಅಂಶಗಳನ್ನು ಅಲ್ಲಗಳೆದು ತಾವು ಯಾವುದೇ ಆಸ್ತಿಗಳನ್ನು ಕಡಿಮೆ ಬೆಲೆಗೆ ನೋಂದಣಿ ಮಾಡಿ ಸರ್ಕಾರಕ್ಕೆ ನೋಂದಣಿ ಮತ್ತು ಮುದ್ರಾಂಕ ಶುಲ್ಕವನ್ನು ನಷ್ಟಗೊಳಿಸಿರುವುದಿಲ್ಲ. ಸರ್ಕಾರಿ ಸುತ್ತೋಲೆ ಮತ್ತು ಉಚ್ಚ ನ್ಯಾಯಾಲಯದ ಆದೇಶಗಳನ್ನು ಉಲ್ಲಂಘಿಸಿ ಯಾವುದೇ ಗ್ರಾಂಠಣ ಅಥವಾ ಇತರೆ ಸ್ವತ್ತುಗಳನ್ನು ನೋಂದಣಿ ಮಾಡಿರುವುದಿಲ್ಲ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

4. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನ ಅಂಶಗಳನ್ನು ಪುನರುಚ್ಚರಿಸಿರುತ್ತಾರೆ.

5. ದೂರುದಾರರು ಸಲ್ಲಿಸಿದ ದೂರು ಆಕ್ಷೇಪಣೆ, ಪ್ರತ್ಯುತ್ತರ ಮತ್ತು ದಾಖಲೆಗಳನ್ನು ಪರಿಶೀಲಿಸಿದಾಗ, ಈ ಪ್ರಕರಣದಲ್ಲಿ ಎಸ್.ಪಿ.ಕಲೋ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರು ತನಿಖೆ ಮಾಡಿ ವರದಿ ಸಲ್ಲಿಸಿರುತ್ತಾರೆ. ದೂರುದಾರರು ಲಗತ್ತಿಸಿರುವ ದಾಖಲೆಗಳನ್ನು ಪರಿಶೀಲಿಸಿದಾಗ ಎದುರುದಾರರು ದೂರಿನಲ್ಲಿ ನಮೂದಿಸಿರುವ ಆಸ್ತಿಗಳನ್ನು ನೋಂದಣಿ ಮಾಡಿರುವುದು

ಕಂಡುಬರುತ್ತದೆ. ಆದರೆ ಈ ರೀತಿ ನೋಂದಣಿಯಿಂದ ಎದುರುದಾರರು ಭ್ರಷ್ಟಾಚಾರಕ್ಕೆ ಒಳಗಾಗಿ ಸರ್ಕಾರಕ್ಕೆ ಮುದ್ರಾಂಕ ಮತ್ತು ನೊಂದಣಿ ಶುಲ್ಕ ನಷ್ಟವಾಗಿದೆಯೇ ಎನ್ನುವುದನ್ನು ಪರಿಶೀಲಿಸಬೇಕಾಗುತ್ತದೆ.

6. ತನಿಖಾಧಿಕಾರಿಗಳ ವರದಿಯನ್ನು ಪರಿಶೀಲಿಸಿದಾಗ ಎದುರುದಾರರು ಈ ಕೆಳಗಿನಂತೆ ದಾಖಲೆಗಳನ್ನು ಪಡೆದು ವ್ಯಾಪಕ ಭ್ರಷ್ಟಾಚಾರಕ್ಕೊಳಗಾಗಿ ಸರ್ಕಾರಕ್ಕೆ ನಷ್ಟವುಂಟುಮಾಡಿರುತ್ತಾರೆಂದು ಅಭಿಪ್ರಾಯಪಟ್ಟಿರುತ್ತಾರೆ.

| ಕ್ರಮ ಸಂಖ್ಯೆ | ಸಂಗ್ರಹಿಸಲಾಗಿರುವ ದಾಖಲಾತಿಗಳು | ದೃಢೀಕರಿಸುವ ಅಂಶಗಳು |
|---|---|---|
| 1 | ಜಿಲ್ಲಾ ನೊಂದಣಾಧಿಕಾರಿಗಳು, ಬೆಂ.ಗ್ರಾ.ಜಿ.ಅವರ ಪತ್ರ ಸಂ.ಆರ್.ಜಿ.ಎನ್.36/2013-14 ದಿ.13.11.2013 ಮತ್ತು 9 ಲಗತ್ತುಗಳು. | 1. ಸ್ಥಿರಾಸ್ತಿಗಳ ನೋಂದಣಿ ಸಮಯದಲ್ಲಿ ಅನುಸರಿಸಬೇಕಾದ ಮಾರ್ಗಸೂಚಿಗಳು<br>2. ನೆಲಮಂಗಲ ಪುರಸಭೆಯಲ್ಲಿ ಆಸ್ತಿಗಳನ್ನು ಮಾರುಕಟ್ಟೆ ಮೌಲ್ಯಕ್ಕಿಂತ ಕಡಿಮೆ ಬೆಲೆಗೆ ಅಪಮೌಲ್ಯಮಾಡಿರುವ ಬಗ್ಗೆ.<br>3. ಟ್ಯಾನ್ ನಂ./ಫಾರ್ಮ ನಂ.60/61ರಲ್ಲಿ ಘೋಷಣೆ ಪಡೆದಿರುವ ಬಗ್ಗೆ ಇತ್ಯಾದಿ ಮಾಹಿತಿಗಳು.<br>ಇವುಗಳ ಪರಿಶೀಲನೆಯಿಂದ ನೆಲಮಂಗಲತಾ. ಭಾವಿಕೆರೆ ಗ್ರಾಮದ ನೋಂದಣಿ ಸಮಯದಲ್ಲಿ 1,26,95,500/- ರೂ.ಗಳ ಅಪಮೌಲ್ಯಕ್ಕೆ ನೋಂದಣಿ ಮಾಡಿ, 25,55,114/- ರೂ.ಗಳ ಮುದ್ರಾಂಕ ಮತ್ತು ನೋಂದಣಿ ಶುಲ್ಕ ಕೊರತೆ ಕಂಡುಬಂದಿದ್ದು, ಇಷ್ಟು ಬೊಕ್ಕಸಕ್ಕೆ ನಷ್ಟವಾಗಿರುತ್ತದೆ. |
| 2 | ಪತ್ರ ಸಂ.ಆರ್.ಜಿ.ಎನ್.36/2013-14 ದಿ.29.1.2014 | ದೂರುದಾರರು ಮಾಡಿರುವ ಆಪಾದನೆಗಳ ಸಂಬಂಧ ದಾಖಲೆಗಳನ್ನು ಪರಿಶೀಲಿಸಿ ವಿವಾದಿತ ಜಮೀನುಗಳ ನೋಂದಣಿ ಸಮಯದಲ್ಲಿ ಅಪಮೌಲ್ಯವಾಗಿರುವುದನ್ನು ದೃಢಪಡಿಸಿರುತ್ತಾರೆ. |
| 3 | ಪಿಡಿಒ ಅರಿಶಿನಕುಂಟೆ ಗ್ರಾಪಂ.ಇವರ ಪತ್ರ ದಿ.21.2.2014 | ಗ್ರಾಮಪಂಚಾಯತಿ ವ್ಯಾಪ್ತಿಯ ಅನಧಿಕೃತ ಆಸ್ತಿಗಳ ನೋಂದಣಿ ನಿಯಂತ್ರಿಸುವಂತೆ ಪಂಚಾಯತಿ ಇಲಾಖೆಯಿಂದ ನೀಡಿರುವ ಸುತ್ತೋಲೆಯ ಅಂಶಗಳನ್ನು ಉಲ್ಲಂಘಿಸಿರುತ್ತಾರೆ. |
| 4 | ಪಿಡಿಒ ಎಂಟಗಾನಹಳ್ಳಿ ಗ್ರಾ.ಪಂ.ಇವರ ಪತ್ರ ಸಂ.21.2.2014 | ವಿವಾದಿತ ಆಸ್ತಿಗಳಾದ ಭಾವಿಕೆರೆಗ್ರಾಮದು ಸ.ನಂ.103, 10/2, 11/2, 108 ಹಾಗೂ 106 ಜಮೀನುಗಳು ಕೃಷಿ ಜಮೀನುಗಳೆಂಬುದಾಗಿಯೂ ಹಾಗೂ ಮಲ್ಲರಬಾಣವಾಡಿ ಗ್ರಾಮದ ಖಾತೆ ಸಂ.507/533, 507/450, 510/511 ನಿವೇಶನಗಳ ನೋಂದಣಿಯಲ್ಲಿ ಸರ್ಕಾರಿ ಸುತ್ತೋಲೆಯ ಅಂಶಗಳನ್ನು ಉಲ್ಲಂಘಿಸಿದ ಬಗ್ಗೆ ಮಾಹಿತಿ ಲಭ್ಯವಿಲ್ಲವೆಂಬುದಾಗಿ ವರದಿ ನೀಡಿರುತ್ತಾರೆ. |

| ಕ್ರಮ ಸಂಖ್ಯೆ | ಹೇಳಿಕೆ/ವರದಿ ನೀಡಿರುವವರ ವಿವರ | ದೃಢೀಕರಿಸುವ ಅಂಶಗಳು |
|---|---|---|
| 1 | ಶ್ರೀ ಸತೀಶ್ ಕುಮಾರ್.ಕೆ. ಜಿಲ್ಲಾ ನೋಂದಣಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ. | ಇವರು ದಿ..16.12.2013ರಂದು ನೀಡಿರುವ ತಮ್ಮ ವರದಿಯಲ್ಲಿ ನೆಲಮಂಗಲ ಪುರಸಭೆ ವ್ಯಾಪ್ತಿಯ ಸ್ವತ್ತುಗಳ ಣನೋಂದಣಿ ಸಮಯದಲ್ಲಿ ಮಾರುಕಟ್ಟೆ ಮೌಲ್ಯಕ್ಕಿಂತ ಕಡಿಮೆ ಬೆಲೆಗೆ ನೋಂದಣಿ ಮಾಡಿ, 2,37,272/-ರೂ.ಗಳ ಹಣ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗಿರುತ್ತದೆ.<br>ಬಾವಿಕೆರೆ ಗ್ರಾಮದ ಜಮೀನುಗಳ ನೋಂದಣಿ ಸಮಯದಲ್ಲಿ ದಸ್ತಾವೇಜುಗಳನ್ನು ಅಪಮೌಲ್ಯಕ್ಕೆ ನೋಂದಣಿ ಮಾಡಿದ್ದು ಇದರಿಂದ ಸರ್ಕಾರದ ಬೊಕ್ಕಸಕ್ಕೆ 20,17,842/-ರೂ.ಗಳ ನಷ್ಟವಾಗಿರುತ್ತದೆ. |

7. ಎದುರುದಾರರು ಮಾರುಕಟ್ಟೆ ಮೌಲ್ಯಕ್ಕಿಂತ ಕಡಿಮೆ ಬೆಲೆಗೆ ದಸ್ತಾವೇಜುಗಳನ್ನು ನೋಂದಾಯಿಸಿದ್ದು, ಮತ್ತು ಅಪಮೌಲ್ಯವಾಗಿರುವುದು ಕಂಡುಬರುತ್ತದೆ. ಅದು ಈ ಕೆಳಗಿನಂತೆ ಇರುತ್ತದೆ.

| ಕ್ರ.ಸಂ. | ದಸ್ತಾವೇಜು ಸಂ. ಸೈಟ್ ನಂ. | ವಿಸ್ತೀರ್ಣ/ಸರ್ವೆ/ಖಾತೆ ನಂ | ವಿಸ್ತೀರ್ಣ | ಸಿವಿಸಿ ಮೌಲ್ಯ ಪ್ರತಿ ಚ.ಅಡಿಗೆ | ಸಿವಿಸಿ ಮಾರುಕಟ್ಟೆ ಮೌಲ್ಯ | ದಸ್ತಾವೇಜಿನಲ್ಲಿ ನಮೂದಿಸಿರುವ ಮೌಲ್ಯ | ವ್ಯತ್ಯಾಸ | ಒಟ್ಟು ಕೊರತೆ |
|---|---|---|---|---|---|---|---|---|
| 1 | 12234/12-13 | 7379 | 100*50 | 1000 | 50,00,000 | 35,00,000 | -15,00,000 | 99,750 |
| 2 | 12235/12-13 | 7379 | 100*50 | 1000 | 50,00,000 | 35,00,000 | -15,00,000 | 99,750 |
| ನೆಲಮಂಗಲ ತಾಲ್ಲೂಕು ಕಸಬಾ ಹೋಬಳಿ ಯಂಟಗಾನಹಳ್ಳಿ ಗ್ರಾಮಪಂಚಾಯತಿ, ಬಾವಿಕೆರೆ ಗ್ರಾಮದ ವ್ಯಾಪ್ತಿಗೆ ಒಳಪಟ್ಟ ಸ್ವತ್ತುಗಳನ್ನು ಅಪಮೌಲ್ಯಕ್ಕೆ ನೋಂದಣಿ ಮಾಡಿರುವ ಬಗ್ಗೆ ವಿವರ | | | | | | | | |
| 3 | 13720/12-13 | 7580 | 40*30 | 700 | 8,40,000 | 7,80,000 | -60,000 | 3,990 |
| 4 | 11960/12-13 | 01 | 29*26 | 700 | 528000 | 416000 | -112000 | 7448 |
| 5 | 11943/12-13 | 08 | 30*44 | 700 | 924000 | 726000 | -198000 | 13167 |
| 6 | 11915/12-13 | 15 | 30*44 | 700 | 924000 | 726000 | -198000 | 13167 |
| 7 | 378/12-13 | ಸರ್ವೆ ನಂ.103 | 1 ಎಕರೆ | - | 13068000 | 3200000 | -9868000 | 656222 |
| 8 | 379/12-13 | ಸರ್ವೆ ನಂ.103 | 1.03 ಎಕರೆ | - | 14048000 | 2150000 | 10608000 | 705432 |
| 9 | 10720/12-13 | ಸರ್ವೆ ನಂ.103 | 0-25 ಗುಂಟೆ | - | 8167500 | 2000000 | -6167500 | 410138 |
| 10 | 05647/12-13 | ಸರ್ವೆ ನಂ.103 | 0-15 | - | 4999999 | 1200000 | -3700000 | 246050 |
| ಒಟ್ಟು | | | | | 53399500 | 18198000 | -12695500 | 2255114 |

8.	ಈ ಮೇಲ್ಕಾಣಿಸಿದ ತನಿಖಾಧಿಕಾರಿಗಳ ವರದಿಯನ್ನು ಕೂಲಂಕುಷವಾಗಿ ದಾಖಲಾತಿ ಮತ್ತು ಹೇಳಿಕೆಗಳ ಆಧಾರದ ಮೇಲೆ ಪರಿಶೀಲಿಸಲಾಗಿ ಎದುರುದಾರರು ಮಾರುಕಟ್ಟೆ ಮೌಲ್ಯಕ್ಕಿಂತ ಅಪಮೌಲ್ಯಕ್ಕೆ ದಾಖಲಾತಿಗಳನ್ನು ನೋಂದಣಿ ಮಾಡಿ ಸರ್ಕಾರದ ಬೊಕ್ಕಸಕ್ಕೆ 22,55,114/-ರೂ.ಗಳಷ್ಟು ನಷ್ಟವುಂಟುಮಾಡಿರುತ್ತಾರೆಂದು ಕಂಡುಬರುತ್ತದೆ. ಅದೇ ರೀತಿ ಖಾತೆ ಸಂ.7557,7580,7581, ಇವುಗಳ ನೋಂದಣಿ ಸಮಯದಲ್ಲಿ ಮಾರುಕಟ್ಟೆ ಮೌಲ್ಯಕ್ಕಿಂತ ಕಡಿಮೆ ಮೊತ್ತಕ್ಕೆ ನೋಂದಣಿ ಮಾಡಿ 2,37,272/-ರೂ.ಗಳ ನಷ್ಟವುಂಟುಮಾಡಿರುತ್ತಾರೆಂದು ಕಂಡುಬರುತ್ತದೆ.

9.	ಬಾವಿಕೆರೆ ಗ್ರಾಮದ ಜಮೀನುಗಳ ನೋಂದಣಿ ವೇಳೆಯಲ್ಲಿಯೂ ಮಾರುಕಟ್ಟೆ ಮೌಲ್ಯಕ್ಕಿಂತ ಅಪಮೌಲ್ಯಕ್ಕೆ ದಾಖಲಾತಿಗಳನ್ನು ನೋಂದಣಿ ಮಾಡಿ ಸರ್ಕಾರದ ಬೊಕ್ಕಸಕ್ಕೆ 20,17,842/-ರೂ.ಗಳಷ್ಟು ನಷ್ಟವುಂಟಾಗಿರುತ್ತದೆ. ಕೇಂದ್ರ ಮೌಲ್ಯಮಾಪನಸಮಿತಿಯ ವಿಶೇಷ ಸೂಚನೆಗಳನ್ವಯ ಭೂಪರಿವರ್ತನೆ ಮಾಡಲಾದ ಸ್ವತ್ತುಗಳಿಗೆ ಸಂಬಂಧಿಸಿದಂತೆ ಪೂರ್ಣ ವಿಸ್ತೀರ್ಣದ ಅಭಿವೃದ್ದಿಪಡಿಸದ ಸ್ವತ್ತನ್ನು ಪರಭಾರೆ ಮಾಡಿದಾಗ ಕೈಗಾರಿಕೋಪಯೋಗಿ ಉದ್ದೇಶಕ್ಕಾಗಿ ಜಮೀನಿನದರದ ಶೇ.60 ರಷ್ಟು ಹೆಚ್ಚಿಗೆ ವಾಸೋಪಯೋಗಿ ಉದ್ದೇಶಕ್ಕಾಗಿ ಜಮೀನಿನ ದರದ ಶೇ.50ರಷ್ಟು ಹೆಚ್ಚಿಗೆ ಮತ್ತು ವಾಣಿಜ್ಯ ಉದ್ದೇಶಕ್ಕೆ ಶೇ.60 ಹೆಚ್ಚಿನ ದರ ನಿಗಧಿಪಡಿಸಬಹುದಾಗಿದೆ. ಆದರೆ ಎದುರುದಾರರು ಈ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ಕರ್ನಾಟಕ ಮುದ್ರಾಂಕ ಕಾಯ್ದೆ 1957ರ 45(ಎ)(1) ರಡಿಯಲ್ಲಿ ಜಿಲ್ಲಾ ನೋಂದಣಾಧಿಕಾರಿಗಳು ಸೂಕ್ತ ಕ್ರಮ ಜರುಗಿಸಬಹುದಾಗಿದೆ. ಅಲ್ಲದೆ ಕರ್ನಾಟಕ ಮುದ್ರಾಂಕ ಕಾಯ್ದೆ 1957ರ ಕಲಂ.45(ಎ)(3)ರಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ಪಕ್ಷಕಾರರಿಂದ ವಸೂಲಿಗೆ ಕ್ರಮಕೈಗೊಳ್ಳಬಹುದಾಗಿದೆ. ಎದುರುದಾರರ ವಿರುದ್ಧ ಸಹ ನೋಂದಣಿ ಕಾಯ್ದೆ ಕಲಂ.170ರಡಿಯಲ್ಲಿ ಕ್ರಮ ಜರುಗಿಸಬಹುದಾಗಿದೆ.

10.	ಆದ್ದರಿಂದ ಎದುರುದಾರರು ದಸ್ತಾವೇಜುಗಳ ನೋಂದಣಿಯಲ್ಲಿ ಸರ್ಕಾರದ ಮಾರ್ಗಸೂಚಿಗಳನ್ನು ಹಾಗೂ ಕಾನೂನಿನ ನಿಬಂಧನೆಗಳನ್ನು ಉಲ್ಲಂಘಿಸಿ ಆಸ್ತಿಗಳ ಬೆಲೆಗಿಂತ ಕಡಿಮೆ ದರವನ್ನು ದಸ್ತಾವೇಜುಗಳಲ್ಲಿ ನಮೂದಿಸಲು ಅವಕಾಶ ಮಾಡಿಕೊಟ್ಟು, ನೋಂದಣಿ ಮಾಡಿ ಇದರಿಂದ ಸರ್ಕಾರದ ಬೊಕ್ಕಸಕ್ಕೆ ಬರಬೇಕಾದ ಮುದ್ರಾಂಕ ಮತ್ತು ನೋಂದಣಿ ಶುಲ್ಕ ನಷ್ಟವುಂಟಾಗಿದೆಯೆಂದು ಮೇಲ್ನೋಟಕ್ಕ ಕಂಡುಬರುತ್ತದೆ.

11. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, **ಸರ್ಕಾರದ ಬೊಕ್ಕಸಕ್ಕೆ ರೂ.** 22,55,114/-, **ರೂ.**2,37,272, **ಹಾಗೂ ರೂ.**20,17,842/-**ಗಳಷ್ಟು ಮುದ್ರಾಂಕ ಮತ್ತು ನೋಂದಣಿ ಶುಲ್ಕದ ನಷ್ಟವುಂಟಾಗಿದ್ದು, ಈ ಹಣವನ್ನು ಕಾನೂನು ಪ್ರಕಾರ** 2 **ಮತ್ತು** 3**ನೇ ಎದುರುದಾರರಿಂದ ವಸೂಲು ಮಾಡಿಕೊಳ್ಳಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು** ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

12. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 12/6/17.

**[ ನ್ಯಾಯಮೂರ್ತಿ ಸುಭಾಷ್ ಬಿ ಅಡಿ]**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ.**